<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ,</u>

<u>ಮುಳಬಾಗಿಲು</u>

<u>ಸಿ.ಸಿ. ಸಂಖ್ಯೆ: 6239/ 2024</u>

ಸಿ.ಡಬ್ಲ್ಯೂ: 7/ಪಿ.ಡಬ್ಲ್ಯೂ: 3

ಪ್ರಮಾಣೀಕರಿಸಿದ ದಿನಾಂಕ: 13.07.2026

| | |
|---|---|
| ಹೆಸರು | ಎಸ್ ವಿ ಗಂಗಾದರ್ |
| ತಂದೆ/ಗಂಡನ ಹೆಸರು | ಲೇಟ್ ವೆಂಕಟರವಣ |
| ವಯಸ್ಸು | 62 |
| ವೃತ್ತಿ | ನಿವೃತ ಪಿ ಎಸ್ ಐ |
| ವಾಸ | ತಾಯಲೂರು |

<u>ಮುಖ್ಯ ವಿಚಾರಣೆ:- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:-</u>

ನಾನು ದಿನಾಂಕ 2023 ರಿಂದ 2024 ರವರಗೆ ಮುಳಬಾಗಿಲು ನಗರ ಪೋಲಿಸ್ ಠಾಣೆಯಲ್ಲಿ ಪಿ ಎಸ್ಸ ಐ ಅಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ ದಿನಾಂಕ 18.01.2024 ರಂದು ಬಳಗ್ಗೆ 10.30 ಗಂಟೆಗೆ ನೀಡಿದ ದೂರನ್ನು ಸ್ವೀಕರಿಸಿ ಮೊ ಸಂ, 12/2024 ರಂತೆ ಪ್ರಕರಣ ದಾಖಲು ಮಾಡಿ ಪ್ರ ವ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಪ್ರ ವ ವರದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ 9 ಎಂದು ಸಹಿಯನ್ನು ನಿಪಿ 9 (ಎ) ಎಂದು ಗುರುತಿಸಲಾಯಿತು.

ಮದ್ಯಾಹ್ನ 2.00 ರಿಂದ 3.00 ರವರೆಗೆ ಚಾಸಾ 1 ರಿಂದ 3 ರವರ ಸಮಕ್ಷಮ ಬಿ ಎಂ ಸಿ ಪೆಟ್ರೋಲ್ ಬಂಕ್ ಬಳಿ ಮಹಜರ್ ಜರುಗಿಸಿ ಅಳವಡಿಸಿದ್ದ ಪ್ಲೆಕ್ಸ್ ಹಾಗೂ ಬ್ಯಾನರ್ ನ ಪೋಟೊ ತೆಗೆದಿರುತ್ತೇನೆ. ನಂತರ ಪಲ್ಲಿಗರ ಪಾಳ್ಯದ ಬಳಿ ಚಾಸಾ 1 ರಿಂದ 3 ರವರ ಸಮಕ್ಷಮ 3.15 ರಿಂದ 4.15 ರವರೆಗೆ ಮಹಜರ್ ಜರುಗಿಸಿ ಬ್ಯಾನರ್ ನ ಭಾವಚಿತ್ರ ತೆಗೆದಿರುತ್ತೇನೆ. ನಂತರ ಕುರುಬರಪೇಟೆ ವೃತ್ತದಲ್ಲಿ ಚಾಸಾ 1 ರಿಂದ 3 ರವರ ಸಮಕ್ಷಮ 4.10 ರಿಂದ 5.00 ರವರೆಗೆ ಮಹಜರ್ ಜರುಗಿಸಿ ಬ್ಯಾನರ್ ನ ಭಾವಚಿತ್ರ ತೆಗೆದಿರುತ್ತೇನೆ. 3 ಮಹಜರ್ ಗಳನ್ನು ಈಗಾಗಲೇ ನಿಪಿ 2 ರಿಂದ 4 ಎಂದು ಗುರುತಿಸಿದ್ದು ಸಹಿಗಳನ್ನು ನಿಪಿ 2 (ಸಿ) ರಿಂದ 4 (ಸಿ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ತೆಗೆದಯಾದ 3 ಭಾವ ಚಿತ್ರಗಳನ್ನು ಈಗಾಗಲೇ ನಿಪಿ 5 ರಿಂದ 7 ಎಂದು ಗುರುತಿಸಿಲಾಗಿರುತ್ತದೆ . ದಿನಾಂಕ 20.01.2024 ರಂದು ಚಾಸಾ 2 ಮತ್ತು 3 ರವರ ಹೇಳಿಕೆಗಳನ್ನು ದಾಖಲು ಮಾಡಿರುತ್ತೇನೆ. ವರ್ಗಾವಣೆಯಾದ ಕಾರಣ ಕಡತವನ್ನು ಹಸ್ತಾಂತರಿಸಿರುತ್ತೇನೆ.

<u>ಪಾಪಾಟೀ ಸವಾಲು:- 1ನೇ ಆರೋಪಿ ಪರ ಸಿ ವಿ ಎಸ್ ವಕೀಲರಿಂದ:-</u>

ನಾನು ಅ ದಿನ ಬೆಳಗ್ಗೆ 8.00 ಗಂಟೆಗೆ ಠಾಣೆಗೆ ಹಾಜರಾಗಿರುತ್ತೇನೆ. ಮಹಜರ್ ಜರುಗಿಸಲು ಮದ್ಯಾಹ್ನ 2.00 ಗಂಟೆಗೆ ನಾನು ಮತ್ತು ಚಾಸಾ 5 ರವರು ಸ್ಥಳಕ್ಕೆ ಹೋಗಿದ್ದು ಚಾಸಾ 2 ಮತ್ತು 3 ರವರು ಸ್ಥಳದಲ್ಲಿ ಇದ್ದರು. ಇಲಾಖಾ ವಾಹನದಲ್ಲಿ ನಾನು ಹಾಗೂ ಸಿಬ್ಬಂದಿಯನ್ನು ಹೊರತುಪಡಿಸಿ ಬೇರೆ ಯಾರು ಬಂದಿರಲಿಲ್ಲ ಎಂದರೆ ಸರಿ . ಇಲಾಖಾ ವಾಹನವನ್ನು ಚಾಸಾ1 ರವರ ಚಾಲನೆ ಮಾಡಿಕೊಂಡು ಬಂದಿರುತ್ತಾರೆ. ಸ್ಥಳದಲ್ಲಿ ಪೋಟೋವನ್ನು ಚಾಸಾ 5 ರವರು ತೆಗೆದಿರುತ್ತಾರೆ. ಚಾಸಾ 5 ರವರು

ನಿಪಿ 5 ರಿಂದ 7 ನ್ನು ಠಾಣೆಯಲ್ಲಿ ಪ್ರಿಂಟ್ ತೆಗೆದಿರುತ್ತಾರೆ.



ಸದರಿ ಪೋಟೋಗಳನ್ನು ಯಾವ ಪ್ರಿಂಟರ್ ನಿಂದ ತೆಗೆಯಲಾಗಿದೆ ಎಂದು ಗೊತ್ತಿಲ್ಲ. ನಿಮ್ಮ ಠಾಣೆಯಲ್ಲಿ ಪೋಟೋಗಳನ್ನು ಎಡಿಟ್ ಸಹ ಮಾಡಬಹುದು ಎಂದರೆ ಸರಿ . ನಿಪಿ 5 ರಿಂದ 7 ನ್ನು ನಿಮ್ಮ ಠಾಣೆಯಲ್ಲಿ ಎಡಿಟ್ ಮಾಡಲಾಗಿದೆ ಎಂದರೆ ಸರಿಯಲ್ಲ.

ನಿಪಿ 2 ರಿಂದ 4 ನ್ನು ಎ ಎಸ್ ಐ ರವರು ಬೆರಳಚ್ಚು ಮಾಡಿದ್ದು ಅವರ ಹೆಸರು ನೆನಪಿಲ್ಲ. ಇಲಾಖಾ ವಾಹನದಲ್ಲಿ ಪ್ರಿಂಟ್ ತೆಗೆಯಲು ಅವಕಾಶ ಇಲ್ಲ ಎಂದರೆ ನಾವು ತೆಗೆದುಕೊಂಡು ಹೋಗಬೇಕು. ನಿಪಿ 2 ರಿಂದ 4 ನ್ನು ಠಾಣೆಯಲ್ಲಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ 2 ಮತ್ತು 3 ರವರಿಗೆ ಮಾಹಿತಿ ತಿಳಿಸದೇ ಠಾಣೆಯಲ್ಲಿ ಸಹಿ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ 2 ಮತ್ತು 3 ರವರ ಹೇಳಿಕೆಗಳನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 18.01.2024 ರಂದು 1 ನೇ ಅರೋಪಿಯು ನಗರ ಸಭೆಗೆ 10 ಸಾವಿರ ಹಣ ಸಂದಾಯ ಮಾಡಿ ಫ್ಲೇಕ್ ಅಳವಡಿಸಲು ಅನುಮತಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಮುಂದುವರೆದು ಮದ್ಯಾಹ್ನ 3.39 ಕ್ಕೆ ಅನುಮತಿ ಪಡೆದಿದ್ದು ಬೆಳಗ್ಗೆ 10.00 ಸಮಯದಲ್ಲಿ ಅಳವಡಿಸಲಾಗಿತ್ತು ಎಂದು ನುಡಿಯುತ್ತಾರೆ. ನಾನು ಹೇಳಿದ ಸಮಯದಲ್ಲಿ ಯಾವುದೇ ಫ್ಲೇಕ್ ಅಳವಡಿಸಿಲ್ಲ ಎಂದರೆ ಸರಿಯಲ್ಲ. ಅರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರೋಪಿಗಳಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ- 1ನೇ ಆರೋಪಿ ಪರ ಸಿ ವಿ ಎಸ್ ವಕೀಲರು ಮಾಡಿದ ಪಾಟೀ ಸವಾಲನ್ನು 2ನೇ ಅರೋಪಿ ಪರ ವಕೀಲರು ಅಳವಡಿಸಿಕೊಂಡಿರುತ್ತಾರೆ.</u>

<u>ಮರುವಿಚಾರಣೆಃ- ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

(ಹರೀಶ್ ಜಿ )
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮುಳಬಾಗಿಲು

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ,

ಮುಳಬಾಗಿಲು

ಸಿ.ಸಿ. ಸಂಖ್ಯೆಃ 6239/ 2024

ಸಿ.ಡಬ್ಲೂ: 2/ಪಿ.ಡಬ್ಲೂಃ 2

ಪ್ರಮಾಣೀಕರಿಸಿದ ದಿನಾಂಕಃ 13.07.2026

| | |
|---|---|
| ಹೆಸರು | ಸೋಮು |
| ತಂದೆ/ಗಂಡನ ಹೆಸರು | ಶಂಕರಪ್ಪ |
| ವಯಸ್ಸು | 42 |
| ವೃತ್ತಿ | ಪ್ಲಂಬಿಗ್ ಕೆಲಸ |
| ವಾಸ | ಮುಳಬಾಗಿಲು |

ಮುಖ್ಯ ವಿಚಾರಣೆಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಚಾಸಾ 3 ರವರು ಗೊತ್ತಿಲ್ಲ, ಈ ಪ್ರಕರಣದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಪಿ 2 ರಿಂದ 4 ರಲ್ಲಿರುವ ಸಹಿಗಳನ್ನು ನೋಡಿ ಗುರುತಿಸಿದ್ದು ಅವನ್ನು ನಿಪಿ 2 (ಬಿ) ಯಿಂದ 4 (ಬಿ) ಎಂದು ಗುರುತಿಸಲಾಯಿತು. ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ದಾಖಲು ಮಾಡಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಜರುಗಿಸಿಲ್ಲ ಹಾಗೂ ಪೋಟೋ ತೆಗೆದಿರುವುದಿಲ್ಲ.

(ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಮದ್ಯಾಹ್ನ 2.00 ರಿಂದ 3.00 ರವರೆಗೆ ನನ್ನ ಹಾಗೂ ಚಾಸಾ 1 ಮತ್ತು 3 ರವರ ಸಮಕ್ಷಮ ಬಿ ಎಂ ಸಿ ಪೆಟ್ರೋಲ್ ಬಂಕ್ ಬಳಿ ಮಹಜರ್ ಜರುಗಿಸಿ ಅಳವಡಿಸಿದ್ದ ಪ್ಲೆಕ್ಸ್ ಹಾಗೂ ಬ್ಯಾನರ್ ನ ಪೋಟೊ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಪಲ್ಲಿಗರ ಪಾಳ್ಯದ ಬಳಿ ಪೋಲಿಸರು ನನ್ನ ಹಾಗೂ ಚಾಸಾ 1 ಮತ್ತು 3 ರವರ ಸಮಕ್ಷಮ 3.15 ರಿಂದ 4.15 ರವರೆಗೆ ಮಹಜರ್ ಜರುಗಿಸಿ ಬ್ಯಾನರ್ ನ ಭಾವಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಕುರುಬರಪೇಟೆ ವೃತ್ತದಲ್ಲಿ ನನ್ನ ಹಾಗೂ ಚಾಸಾ 1 ಮತ್ತು 3 ರವರ ಸಮಕ್ಷಮ 4.10 ರಿಂದ 5.00 ರವರೆಗೆ ಮಹಜರ್ ಜರುಗಿಸಿ ಬ್ಯಾನರ್ ನ ಭಾವಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಪ್ರಕರಣದ ಸಂಬಂದ ದಿನಾಂಕ 20.01.2024 ರಂದು ತನಿಖಾಧಿಕಾರಿಗಳ ಮುಂದೆ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಂಲ್ಲ. ಸದರಿ ಹೇಳಿಕೆಯನ್ನು ನಿಪಿ 8 ಎಂದು ಗುರುತಿಸಲಾಯಿತು. ನಿಪಿ 2 ರಿಂದ 4 ಮತ್ತು 8 ರಲ್ಲಿ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ- ಇಲ್ಲಾ

ಮರುವಿಚಾರಣೆಃ- ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

(ಹರೀಶ್ ಜಿ )
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮುಳಬಾಗಿಲು

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ,

ಮುಳಬಾಗಿಲು

ಸಿ.ಸಿ. ಸಂಖ್ಯೆ: 6239/ 2024

ಸಿ.ಡಬ್ಲ್ಯೂ: 1/ಪಿ.ಡಬ್ಲ್ಯೂ: 1

ಪ್ರಮಾಣೀಕರಿಸಿದ ದಿನಾಂಕ: 13.07.2026

| | |
|---|---|
| ಹೆಸರು | ಪ್ರಶಾಂತ್ |
| ತಂದೆ/ಗಂಡನ ಹೆಸರು | ಅಂಜನೇಯರೆಡ್ಡಿ |
| ವಯಸ್ಸು | 30 |
| ವೃತ್ತಿ | ಪಿ ಸಿ 529 , ಕೋಲಾರ ಸಂಚಾರಿ ಪೋಲಿಸ್ ಠಾಣೆ |
| ವಾಸ | ಶ್ರೀನಿವಾಸಪುರ |

ಮುಖ್ಯ ವಿಚಾರಣೆ:- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:-

ನಾನು 2022 ರಿಂದ 2025 ರವರಗೆ ಮುಳಬಾಗಿಲು ಪೋಲೀಸ್ ಠಾಣೆಯಲ್ಲಿ ಪಿ ಸಿ ಅಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 18.01.2024 ರಂದು ಬೆಳಗ್ಗೆ 8.00 ಗಂಟೆಗೆ ಗುಪ್ತ ಮಾಹಿತಿ ಕರ್ತವ್ಯಕ್ಕೆ ನನ್ನನ್ನು ನೇಮಕ ಮಾಡಿದ್ದು ಅದರಂತೆ ನಾನು ಗುಣಗುಂಟೆ ಪಾಳ್ಯ , ಪಲ್ಲಿಗರ ಪಾಳ್ಯ , ಕುರುಬರಪೇಟೆ ಸರ್ಕಲ್ ನಲ್ಲಿ ಗಸ್ತು ಮಾಡುವಾಗ ಗುಣಗುಂಟೆ ಪಾಳ್ಯ ಸರ್ಕಲ್ ಹಾಗೂ ಇತರ ಸಾರ್ವಜನಿಕ ಸ್ಥಳಗಳಲ್ಲಿ ಅಯೋಧ್ಯಯಲ್ಲಿ ಶ್ರೀರಾಮ ದೇವಸ್ಥಾನದ ಪಾರಂಭದ ಸಂಬಂದ ಶ್ರೀರಾಮ ದೇವರ ಪ್ಲೇಕ್ಸ್ ಮತ್ತು ಬ್ಯಾನರ್ ನ್ನು ಅನದಿಕೃತವಾಗಿ ಕಟ್ಟಿರುವುದು ಕಂಡು ಬಂದಿರುತ್ತದೆ. ಧ್ರುವಾ ಚಾರಿಟಬಲ್ ಟ್ರಸ್ಟ್ ಹಾಗೂ ಲವಕುಶ ಜನ್ಮಭೂವಿ ತೀರ್ಥ ಕ್ಷೇತ್ರ ಟ್ಟಿಸ್ ಗೆ ಸೇರಿದ ಅರೋಪಿಗಳ ವಿರುದ್ಧ ವರದಿಯನ್ನು ನೀಡಿರುತ್ತೇನೆ. ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಸಹಿಯನ್ನು ನಿಪಿ 1 (ಎ) ಎಂದು ಗುರುತಿಸಲಾಯಿತು. ನಂತರ ನಾನು ಮದ್ಯಾಹ್ನ 2.00 ರಿಂದ 3.00 ರವರೆಗೆ ನನ್ನ ಹಾಗುಾ ಚಾಸಾ 2 ಮತ್ತು 3 ರವರ ಸಮಕ್ಷಮ ಬಿ ಎಂ ಸಿ ಪೆಟ್ರೋಲ್ ಬಂಕ್ ಬಳಿ ಮಹಜರ್ ಜರುಗಿಸಿ ಅಳವಡಿಸಿದ್ದ ಪ್ಲೇಕ್ಸ್ ಹಾಗೂ ಬ್ಯಾನರ್ ನ ಪೋಟೊ ತೆಗೆದಿರುತ್ತಾರೆ ನಂತರ ಪಲ್ಲಿಗರ ಪಾಳ್ಯದ ಬಳಿ ಪೋಲಿಸರು ನನ್ನ ಹಾಗೂ ಚಾಸಾ 2 ಮತ್ತು 3 ರವರ ಸಮಕ್ಷಮ 3.15 ರಿಂದ 4.15 ರವರೆಗೆ ಮಹಜರ್ ಜರುಗಿಸಿ ಬ್ಯಾನರ್ ನ ಭಾವಚಿತ್ರ ತೆಗೆದಿರುತ್ತಾರೆ. ನಂತರ ಕುರುಬರಪೇಟೆ ವೃತ್ತದಲ್ಲಿ ನನ್ನ ಹಾಗೂ ಚಾಸಾ 2 ಮತ್ತು 3 ರವರ ಸಮಕ್ಷಮ 4.10 ರಿಂದ 5.00 ರವರೆಗೆ ಮಹಜರ್ ಜರುಗಿಸಿ ಬ್ಯಾನರ್ ನ ಭಾವಚಿತ್ರ ತೆಗೆದಿರುತ್ತಾರೆ. 3 ಮಹಜರ್ ಗಳನ್ನು ನೋಡಿ ಗುರುತಿಸಿದ್ದು ಅವನ್ನು ನಿಪಿ 2 ರಿಂದ 4 ಎಂದು ಸಹಿಗಳನ್ನು ನಿಪಿ 2 (ಎ) ರಿಂದ 4 (ಎ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ತೆಗೆದಯಾದ 3 ಭಾವ ಚಿತ್ರಗಳನ್ನು ನೋಡಿ ಗುರುತಿಸಿದ್ದು ಅವನ್ನು ನಿಪಿ 5 ರಿಂದ 7 ಎಂದು ಗುರುತಿಸಲಾಯಿತು.

ಪಾಟೀ ಸವಾಲು:- 1ನೇ ಆರೋಪಿ ಪರ ಸಿ ವಿ ಎಸ್ ವಕೀಲರಿಂದ:-

ಅ ರೀತಿ ಮುಳಬಾಗಿಲಿನಲ್ಲಿ ಒಟ್ಟು ಎಷ್ಟು ಪ್ಲೇಕ್ಸ್ ಅಳವಡಿಸಿದ್ದರು ಎಂದರೆ ಗೊತ್ತಿಲ್ಲ. ನಿಮ್ಮ ಠಾಣೆಗೆ ಸಾರ್ವಜನಿಕರ ಸ್ವತ್ತು ಹಾನಿಮಾಡಿರುವ ಬಗ್ಗೆ ದೂರು ಬಂದಿರುತ್ತದೆಯಾ ಎಂದರೆ ಇಲ್ಲ. ಪ್ಲೇಕ್ ಹಾಕಲು

ಅರೋಪಿಗಳು ಅನುಮತಿಯನ್ನು ಪಡೆದಿರುವ ಬಗ್ಗೆ ತಿಳಿದುಕೊಂಡಿರುತ್ತೀರಾ ಎಂದರೆ ಅನುಮತಿ ಪಡೆದಿಲ್ಲ. ದಿನಾಂಕ 18.01.2024 ರಂದು 1ನೇ ಅರೋಪಿಯು ನಗರ ಸಭೆಗೆ 10 ಸಾವಿರ ಹಣ ಸಂದಾಯ ಮಾಡಿ ಪ್ಲೇಕ್ ಅಳವಡಿಸಲು ಅನುಮತಿ ಪಡೆದಿರುತ್ತಾರೆ ಎಂದರೆ ಸರಿ. ಮುಂದುವರೆದು ಮದ್ಯಾಹ್ನ 3.39 ಕ್ಕೆ ಅನುಮತಿ ಪಡೆದಿದ್ದು ಬೆಳಗ್ಗೆ ಗಸ್ತು ಮಾಡುವಾಗ 8.00 ಸಮಯದಲ್ಲಿ ಅಳವಡಿಸಲಾಗಿತ್ತು ಎಂದು ನುಡಿಯುತ್ತಾರೆ. ನಾನು ಹೇಳಿದ ಸಮಯದಲ್ಲಿ ಯಾವುದೇ ಪ್ಲೇಕ್ ಅಳವಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ಪ್ಲ್ೇಕ್ ಯಾವ ಸಮಯಕ್ಕೆ ಅಳವಡಿಸಲಾಗಿತ್ತು ಎಂದು ನಮೂದಿಸಿರುವುದಿಲ್ಲ ಎಂದರೆ ನಾನು ಗಸ್ತು ಮಾಡುವ ಸಮಯದಲ್ಲ ಫ್ಲೇಕ್್ಸ ಹಾಕಿತ್ತು ಎಂದು ನುಡಿಯುತ್ತಾರೆ. ಲವಕುಶ ಜನ್ಮ ಭೂಮಿ ತೀರ್ಥ ಕ್ಷೇತ್ರ ಹಾಗೂ ಧ್ರುವಾ ಚಾರಿಟಬರಲ್ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಂಸ್ಥೆಗಳ ಅಧ್ಯಕ್ಷರು ಹಾಗೂ ಕಾರ್ಯದರ್ಶಿ ಯಾರು ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಗೊತ್ತಿಲ್ಲ. ನಿಪಿ 2 ರಿಂದ 4 ಮಾಡುವ ಸಮಯದಲ್ಲಿ ನಾನು , ಚಾಸಾ 2 , 3 ಹಾಗೂ ಚಾಸಾ 7 ರವರು ಇಲಾಖಾ ಜೀಪ್ ನಲ್ಲಿ ಹೊಗಿದ್ದೇವು. ಚಾಸಾ 2 ಮತ್ತು 3 ರವರು ಎಲ್ಲಿ ಇದ್ದರು ಎಂದರೆ ಸ್ಥಳದಲ್ಲಿ ಇದ್ದರು . ಪಲ್ಲಿಗರ ಪಾಳ್ಯ ಹಾಗೂ ಕುರುಬರ ಪಾಳ್ಯಕ್ಕೆ ಯಾವ ಸಮಯಕ್ಕೆ ಹೋಗಿರುತ್ತೀರಿ ಎಂದರೆ 3.15 ಹಾಗೂ 4.10 ಕ್ಕೆ ಹೋಗಿರುತ್ತೇವೆ. ನಿಪಿ 3 ಮಹಜರ್ ಮಾಡುವ ಸಮಯದಲ್ಲಿ ಎಷ್ಟು ಜನ ಸೇರಿದ್ದರು ಎಂದರೆ 10–15 ಜನರು ಓಡಾಡುತ್ತಿದ್ದರು. ನಿಮ್ಮನ್ನು ಹಾಗೂ ಚಾಸಾ 7 ರವರನ್ನು ಹೊರತುಪಡಿಸಿ ಬೇರೆ ಪೋಲಿಸರು ಇರಲಿಲ್ಲ ಎಂದರೆ ಚಾಸಾ 5 ರವರು ಇದ್ದರು, ನಿಪಿ 2 ರಿಂದ 4 ನ್ನು ಎಲ್ಲಿ ಬೆರಳಚ್ಚು ಮಾಡಿರುತ್ತಾರೆ ಎಂದರೆ ಸ್ಥಳದಲ್ಲಿ ಬೆರಳಚ್ಚು ಮಾಡಿರುತ್ತಾರೆ. ನಿಪಿ 2 ರಿಂದ 4 ನ್ನು ಇಲಾಖಾ ಜೀಪ್ ನಲ್ಲಿ ಪ್ರಿಂಟ್ ತೆಗೆದಿರುತ್ತಾರೆ. ನಿಮ್ಮ ಇಲಾಖಾ ವಾಹನದಲ್ಲ ಪ್ರಿಂಟ್ ತಗೆಯಲು ಯಾವುದೇ ಸಲಕರಣೆ ಇರಲಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ನಿಮ್ಮ ಇಲಾಖಾ ವಾಹನದಲ್ಲಿ ಪ್ರಿಂಟ್ ತೆಗೆಯುವ ಸಲಕರಣೆ ಇಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ಚಾಸಾ 7 ರವರು ಠಾಣೆಯಲ್ಲಿ ನಿಪಿ 2 ರಿಂದ 4 ನ್ನು ತಯಾರಿಸಿರುತ್್ೇವೆ ಎಂದರೆ ಸರಿಯಲ್ಲ, ಚಾಸಾ 2 ಮತ್ತು 3 ರವರಿಗೆ ಯಾವುದೇ ಮಾಹಿತಿ ಇಲ್ಲದೇ ಠಾಣೆಯಲ್ಲಿ ಸಹಿ ಪಡೆಯಲಾಗಿದೆ ಎಂದರೆ ಸರಿಯಲ್ಲ. ನಿಪಿ 5 ರಿಂದ 7 ನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಅರೂಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರೋಪಿಗಳಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ- 1ನೇ ಆರೋಪಿ ಪರ ಸಿ ವಿ ಎಸ್ ವಕೀಲರು ಮಾಡಿದ ಪಾಟೀ ಸವಾಲನ್ನು 2ನೇ ಅರೋಪಿ ಪರ ವಕೀಲರು ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆಃ- ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

(ಹರೀಶ್ ಜಿ )
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮುಳಬಾಗಿಲು